**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,**
**ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ: **305/2022** ದಿನಾಂಕ: **02-04-2026**

ಪಿ.ಡಬ್ಲ್ಯೂ: **1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಃ **2** ರಿಂದ **5** ನೇ ಪ್ರತಿವಾದಿಯ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಿಂದ

1. ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ . ನನಗೆ ಕನ್ನಡ ಭಾಷೆ ಓದಲು -ಬರೆಯಲು ಬರುತ್ತದೆ.ನಾನು ರಾಮಜ್ಜ ಮತ್ತು ಸರ್ಕಾರಿ ಅಧಿಕಾರಿಗಳ ವಿರುದ್ಧ ದಾವೆ ದಾಖಲಿಸಿರುತ್ತೇನೆ. ನಾನು ಸರ್ವೇ ನಂ. 27/2 ಎ ಜಮೀನಿನ ಸ್ವಾಧೀನಾನುಭವದಲ್ಲಿದ್ದು ಪಹಣಿ ಪತ್ರಿಕೆ ಯಲ್ಲಿ ಸರ್ವೇ ನಂ. 27/2 ಬಿ ಎಂದು ಬರತ್ತಿದ್ದು ಈ ಬಗ್ಗೆ ಘೋಷಣಾತ್ಮಕ ಪರಿಹಾರ ಕೋರಿ ದಾವೆ ದಾಖಲಿಸಿರುತ್ತೇನೆ. ಈ ರೀತಿ ವರದಿಯನ್ನು ತಹಶೀಲ್ದಾರ್ ರವರು ನೀಡಿರುತ್ತಾರೆ. ಈ ರೀತಿ ಅದಲು ಬದಲಾದ ಬಗ್ಗೆ ತಹಶೀಲ್ದಾರ್ ರವರಿಗೆ ಮನವಿ ನೀಡಿರುತ್ತೇನೆ. ಸದರಿ ಮನವಿ ಮೇರೆಗೆ ತಹಶೀಲ್ದಾರ್ ರವರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ತಹಶೀಲ್ದಾರ್ ರವರು ಲಿಖಿತವಾಗಿ ಯಾವುದೇ ಆದೇಶ ಅಥವಾ ಹಿಂಬರಹ ನೀಡಿರುವುದಿಲ್ಲ.

2 . ನೀಲಕಂಠಪ್ಪ ಎಂದರೆ ನನ್ನ ತಂದೆ . ತಹಶೀಲ್ದಾರ್ ರವರು ನಿಪಿ-3 ರಂತೆ ದಿನಾಂಕ 12.04.2013 ರಂದು ನಮ್ಮ ತಂದೆಯವರು ನೀಡಿದ ಅರ್ಜಿಯನ್ನು ಪೋಡಿ ಕೆಲಸ ಪೂರೈಸಿರುವುದಿಲ್ಲ ಎಂದು ಅರ್ಜಿಯನ್ನು ವಿಲೇವಾರಿ ಮಾಡಿರುತ್ತಾರೆ ಎಂದರೆ ಸರಿ . ಆದ ಕಾರಣ ತಹಶೀಲ್ದಾರ್ ರವರು ನನ್ನ ತಂದೆಯ ಮನವಿ ಮೇರೆಗೆ ಸೂಕ್ತ ಕ್ರಮ ತೆಗೆದುಕೊಂಡು ಹಿಂಬರಹ ನೀಡಿದ್ದರೂ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ನಿಪಿ-3 ನ್ನು ಪ್ರಶ್ನಿಸಿ ನಾನು ಡಿ ಡಿ ಎಲ್ ಆರ್ ರವರಿಗೆ ಮೇಲ್ಮನವಿ ಸಲ್ಲಿಸಿರುವುದಿಲ್ಲ.

3. ಈ ದಾವೆ ದಾಖಲಿಸುವ ಪೂರ್ವದಲ್ಲಿ ನಾನು 2 ರಿಂದ 5 ನೇ ಪ್ರತಿವಾದಿಯರಿಗೆ ನೊಟೀಸ್ ನೀಡಿರುವುದಿಲ್ಲ. ನೊಟೀಸ್ ನೀಡಲು ತೊಂದರೆ ಇತ್ತೆ ಎಂದರೆ ಸಾಕ್ಷಿ ನೋಟೀಸ್ ಕೊಡಬೇಕು ಎಂಬುದರ ಬಗ್ಗೆ ತನಗೆ ಅರಿವು ಇರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು 2 ರಿಂದ 5 ನೇ ಪ್ರತಿವಾದಿಯರ ವಿರುದ್ಧ ಯಾವುದೇ ಪರಿಹಾರ ಕೇಳದ ಕಾರಣ ಅವರ ವಿರುದ್ಧ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ . ಆದ ಕಾರಣ ನಾನು ದಾವೆಯಲ್ಲಿ ಕೇಳಿದ ಪರಿಹಾರಗಳಿಗೆ ಅರ್ಹನಿರುವುದಿಲ್ಲ ಎಂದರೆ ಸರಿಯಲ್ಲ . ಈ ದಾವೆಗೂ ಸದರಿ ಪ್ರತಿವಾದಿಯರಿಗೂ ಮತ್ತು ನಾನು ಕೇಳಿದ ಪರಿಹಾರಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ .

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.